‘ಬಾಲಸಂಸ್ಕಾರ’ ಗ್ರಂಥಮಾಲಿಕೆ : ಖಂಡ ೭

# ಟಿ.ವಿ., ಮೊಬೈಲ್ ಮತ್ತು ಇಂಟರ್‌ನೆಟ್‌ಗಳ ದುಷ್ಪರಿಣಾಮಗಳಿಂದ ಮಕ್ಕಳನ್ನು ರಕ್ಷಿಸಿ !

(Protect your children from the harmful effects of TV, Mobile & Net)

ಕನ್ನಡ (Kannada)

**ಸಂಕಲನಕಾರರು**

ಹಿಂದೂ ರಾಷ್ಟ್ರದ ಸ್ಥಾಪನೆಯ ಉದ್ಘೋಷಕರು

**ಸಚ್ಚಿದಾನಂದ ಪರಬ್ರಹ್ಮ ಡಾ. ಜಯಂತ ಬಾಳಾಜಿ ಆಠವಲೆ**

**ಪೂ. ಸಂದೀಪ ಗಜಾನನ ಆಳಶಿ**

**ಸನಾತನ ಸಂಸ್ಥೆ**

**ಈ ಕಿರುಗ್ರಂಥವನ್ನು ತಾವೂ ಓದಿ ಮತ್ತು ಇತರರಿಗೂ ಓದಲು ಕೊಡಿ !**

**ಪ್ರಸ್ತುತ ಪುನರ್ಮುದ್ರಣದ ೩,೦೦೦ ಪ್ರತಿಗಳು ಮತ್ತು ಇಂದಿನವರೆಗೆ ೮,೦೭೦ ಪ್ರತಿಗಳು ಪ್ರಕಾಶಿತಗೊಂಡಿವೆ !**

**ಪ್ರಕಾಶಕರು :** Shree Siddheshwar Dharmajagruti Sanstha
ಮ.ಸಂ. 2ಬಿ–29ಎ, ಇಂದಿರಾನಗರ, ಕುಕ್ಕಿಕಟ್ಟೆ,
ಉಡುಪಿ 576 101. ಕರ್ನಾಟಕ. ದೂ. : +91 93424 35617
ಇತರ ದೂ.ಕ್ರ. (ಗೋವಾ) : +91 (0832) 2312664
ವಿ–ಅಂಚೆ : granth@sanatan.org

ಜೂನ್ 2021 ರಲ್ಲಿ 'ಟಿ.ವಿ., ಮೊಬೈಲ್ ಮತ್ತು ಇಂಟರ್‌ನೆಟ್ ಇವುಗಳ ಹಾನಿ ತಡೆಗಟ್ಟಿ ಲಾಭ ಪಡೆಯಿರಿ !' ಎಂಬ ಮೂಲ ಖಂಡವನ್ನು ವಿಭಜಿಸಿ 'ಟಿ.ವಿ., ಮೊಬೈಲ್ ಮತ್ತು ಇಂಟರ್‌ನೆಟ್ ಇವುಗಳ ಹಾನಿ ತಡೆಗಟ್ಟಿ ಲಾಭ ಪಡೆಯಿರಿ !' ಮತ್ತು ಕಿರುಗ್ರಂಥ 'ಟಿ.ವಿ., ಮೊಬೈಲ್ ಮತ್ತು ಇಂಟರ್‌ನೆಟ್‌ಗಳ ದುಷ್ಪರಿಣಾಮಗಳಿಂದ ಮಕ್ಕಳನ್ನು ರಕ್ಷಿಸಿ !' ಎಂದು ಎರಡು ಖಂಡಗಳನ್ನಾಗಿ ಮಾಡಲಾಗಿದೆ.

**First Edition :** Vatasavitri Vrata, Kaliyug Varsh 5123 (24.6.2021)
**3rd Reprint :** Holi, Kaliyug Varsh 5125 (24th March 2024)

Translated from the Original Marathi Booklet 'TV, Mobile ani internet yanchya dushparinamanpasun mulana vachava'. This Text is also available in Hindi, English and Tamil.

**ಮುದ್ರಣಸ್ಥಳ** : ಆಮೋದ್ ಗ್ರಾಫಿಕ್ಸ್, ಬೆಂಗಳೂರು – 560 010.

**ದೇಣಿಗೆ ಮೌಲ್ಯ** : ₹ 15/-

**ISBN :** 978-81-953183-3-9 ॐ ಗ್ರಂಥ ಕ್ರ. : 313

© **ಪ್ರಕಾಶಕರು** All rights are reserved. No part of this publication maybe reproduced, stored in a retrieval system or transmitted, in any form or by any means, mechanical, photocopying, recording or otherwise, without prior written permission of the original publisher. Violators will be liable for criminal / civil action.

# ಅನುಕ್ರಮಣಿಕೆ

(ಕೆಲವು ವೈಶಿಷ್ಟ್ಯಪೂರ್ಣ ಉಪಅಂಶಗಳನ್ನೂ ಕೆಳಗೆ ಕೊಡಲಾಗಿದೆ.)


೧. ಆಧುನಿಕ ಪ್ರಸಾರಮಾಧ್ಯಮಗಳಿಂದ ಪ್ರಸ್ತುತ ನಿರ್ಮಾಣವಾಗಿರುವ ಕೌಟುಂಬಿಕ, ಸಾಮಾಜಿಕ ಮತ್ತು ಸಾಂಸ್ಕೃತಿಕ ಭಯಾನಕ ಸ್ಥಿತಿ ೧೩

೧ ಅ. ಮಕ್ಕಳ ಅಪರಾಧಿ ಕೃತ್ಯಗಳಲ್ಲಿ ಹೆಚ್ಚಳ ೧೩

೨. ದೇಶದ ಭಾವೀ ಪೀಳಿಗೆಯನ್ನು ರೂಪಿಸುವ ಸಾಮರ್ಥ್ಯ ಪಾಲಕರಲ್ಲಿ ಮತ್ತು ಶಿಕ್ಷಕರಲ್ಲಿದೆ ! ೧೪

೩. ಪಾಲಕರ ಜವಾಬ್ದಾರಿ ೧೫

೩ ಅ. ಕೆಲವು ಪಾಲಕರ ಅಯೋಗ್ಯ ಮಾನಸಿಕತೆ ೧೫

೩ ಆ. ದೂರದರ್ಶನದ ಸಂದರ್ಭದಲ್ಲಿ ಏನು ಮಾಡಬೇಕು ಮತ್ತು ಏನು ಮಾಡಬಾರದು ? ೧೮

೩ ಇ. ಮಕ್ಕಳು ಸಂಚಾರವಾಣಿ (‘ಮೊಬೈಲ್’)ಯ ದುರುಪಯೋಗವನ್ನು ಹೇಗೆ ಮಾಡುತ್ತಾರೆ ? ೨೪

೩ ಉ. ಪಾಲಕರು ಮಾಡಬೇಕಾದ ಕೆಲವು ಇತರ ಕೃತಿಗಳು ೨೮

೩ ಊ. ಮಕ್ಕಳಿಗೆ ಸಾಧನೆ ಮಾಡಲು ಕಲಿಸುವುದೇ ಎಲ್ಲ ಸಮಸ್ಯೆಗಳಿಗೆ ಉತ್ತರವಾಗಿದೆ ! ೩೯

೪. ಶಿಕ್ಷಕರ ಜವಾಬ್ದಾರಿ ೪೨

**卐 ಸಂಕಲನಕಾರರ ವೈಜ್ಞಾನಿಕ ದೃಷ್ಟಿಕೋನ ಮತ್ತು ಇತರ ಮಾಹಿತಿ ೪೪**

## ಮನೋಗತ

'ಸನಾತನದ 'ಬಾಲಸಂಸ್ಕಾರ' ಗ್ರಂಥಮಾಲಿಕೆಯ 'ಟಿ.ವಿ., ಮೊಬೈಲ್ ಮತ್ತು ಇಂಟರ್‌ನೆಟ್ ಇವುಗಳ ಹಾನಿಯನ್ನು ತಡೆಗಟ್ಟಿ ಲಾಭವನ್ನು ಪಡೆಯಿರಿ !' ಎಂಬ ಗ್ರಂಥವು ಮಕ್ಕಳಿಗಷ್ಟೇ ಅಲ್ಲದೇ, ಪಾಲಕರಿಗೆ ಮತ್ತು ಶಿಕ್ಷಕರಿಗೂ ಉಪಯುಕ್ತವಾಗಿದೆ. ಹೀಗಿರುವಾಗ 'ಪ್ರಸ್ತುತ ವಿಭಿನ್ನ ಕಿರುಗ್ರಂಥದ ಅವಶ್ಯಕತೆ ಏನು ?' ಎಂಬ ಪ್ರಶ್ನೆಯು ಕೆಲವು ಜನರ ಮನಸ್ಸಿನಲ್ಲಿ ಬರಬಹುದು. ಪ್ರಸ್ತುತ ಕಿರುಗ್ರಂಥದ ಉದ್ದೇಶ ಮುಂದಿನಂತಿದೆ.

೧. 'ಪಾಲಕರು ಮತ್ತು ಶಿಕ್ಷಕರೇ ಮಕ್ಕಳ 'ಮೊದಲ ಗುರು'ಗಳಾಗಿರುತ್ತಾರೆ, ಎಂಬುದು ಹಿಂದೂ ಸಂಸ್ಕೃತಿಯ ಬೋಧನೆಯಾಗಿದೆ. ಜೀಜಾಮಾತೆ ಮತ್ತು ದಾದೊಜಿ ಕೊಂಡದೇವ ಇವರು ಶಿವಾಜಿ ಮಹಾರಾಜರ ಮೇಲೆ ಬಾಲ್ಯದಿಂದಲೇ ಒಳ್ಳೆಯ ಸಂಸ್ಕಾರಗಳನ್ನು ಮಾಡಿದುದರಿಂದಲೇ ಕೇವಲ ಹದಿನೈದು ವರ್ಷದ ಶಿವಾಜಿಯು 'ರಾಂಝ್ಯಾದ ಪಾಟೀಲನು ಓರ್ವ ಸ್ತ್ರೀಯ ಮೇಲೆ ಬಲಾತ್ಕಾರ ಮಾಡಿದನೆಂದು ಅವನ ಕೈ-ಕಾಲುಗಳನ್ನು ಮುರಿಯುವ ಶಿಕ್ಷೆಯನ್ನು ಕೊಟ್ಟರು' ಮತ್ತು ಮುಂದೆ ರಾಮರಾಜ್ಯದಂತಹ ಆದರ್ಶ 'ಹಿಂದವೀ ಸ್ವರಾಜ್ಯ'ವನ್ನು ಸ್ಥಾಪಿಸಿದರು. ಇಂದಿನ ಪಾಲಕರಿಗೆ ಮತ್ತು ಶಿಕ್ಷಕರಿಗೆ ಕೂಡ 'ಭಾವೀ ಪೀಳಿಗೆಯನ್ನು ಚಾರಿತ್ರ್ಯಸಂಪನ್ನ, ರಾಷ್ಟ್ರಭಕ್ತ ಮತ್ತು ಧರ್ಮಪ್ರೇಮಿಗಳನ್ನಾಗಿ ರೂಪಿಸುವುದು' ತಮ್ಮ ನೈತಿಕ ಮತ್ತು ರಾಷ್ಟ್ರೀಯ ಕರ್ತವ್ಯವಾಗಿದೆ' ಎಂಬುದರ ಅರಿವು ಉತ್ಕಟವಾಗಿ ಆಗಬೇಕೆಂಬುದು ಈ ಕಿರುಗ್ರಂಥದ ಮುಖ್ಯ ಉದ್ದೇಶವಾಗಿದೆ.

೨. ಮಕ್ಕಳು ಅನುಕರಣ ಪ್ರಿಯರಾಗಿರುತ್ತಾರೆ. ಅವರಿಗೆ ಕೇವಲ ಸಂಸ್ಕಾರಗಳ ಉಪದೇಶ ಮಾಡಿದರೆ ಸಾಕಾಗುವುದಿಲ್ಲ, ಬದಲಾಗಿ ಪಾಲಕರು ಸ್ವತಃ ಸಂಸ್ಕಾರಯುಕ್ತ ಆಚರಣೆಗಳನ್ನು ಮಾಡುವುದು ಆವಶ್ಯಕ ವಾಗಿರುತ್ತದೆ. ಅವರ ಆಚರಣೆಯಿಂದ ಮಕ್ಕಳ ಮೇಲೆ ತಿಳಿಯದೆ ಸಂಸ್ಕಾರ ಗಳಾಗುತ್ತವೆ. ಈ ದೃಷ್ಟಿಯಿಂದ 'ಪಾಲಕರ ಆಚರಣೆ ಹೇಗಿರಬೇಕು ಮತ್ತು ಹೇಗಿರಬಾರದು' ಎಂಬುದರ ಬಗ್ಗೆಯೂ ಈ ಕಿರುಗ್ರಂಥದಲ್ಲಿ ಹೇಳಲಾಗಿದೆ.

೩. ಸದ್ಯ ದೂರದರ್ಶನ, ಮೊಬೈಲ್ ಮತ್ತು ಇಂಟರ್‌ನೆಟ್ ಈ ಪ್ರಸಾರಮಾಧ್ಯಮಗಳ ಒಲವು ಮುಖ್ಯವಾಗಿ ಅಸಂಸ್ಕೃತಿ, ವಿಕೃತಿ, ಅಶ್ಲೀಲತೆಗಳಂತಹ ರಜ-ತಮಾತ್ಮಕ ರೂಢಿಗಳೆಡೆಗೆ ಬಾಗಿವೆ. ಆದುದರಿಂದ ದೊಡ್ಡ ಪ್ರಮಾಣದಲ್ಲಿ ಹಿಂದೂ ಧರ್ಮ ಮತ್ತು ಹಿಂದೂ ಸಂಸ್ಕೃತಿಯ ಹಾನಿಯಾಗುತ್ತಿದೆ. ಹಿಂದೂ ಸಮಾಜಕ್ಕೆ ಧರ್ಮಶಿಕ್ಷಣ ದೊರಕದ ಕಾರಣ ಭಾವೀ ಪೀಳಿಗೆಯು ಭೋಗವಾದಕ್ಕೆ ಎಷ್ಟು ಬಲಿಯಾಗಿದೆ ಎಂದರೆ, ಅದು ತಮ್ಮ ಧರ್ಮವನ್ನೇ ಮರೆತಿದೆ. ಧರ್ಮವು ರಾಷ್ಟ್ರದ ಅಡಿಪಾಯವಾಗಿದೆ. ಧರ್ಮವೇ ಮುಳುಗಿಹೋದರೆ, ರಾಷ್ಟ್ರವು ನಾಶವಾಗಲು ಹೆಚ್ಚು ಸಮಯ ತಾಗಲಾರದು. ಆದುದರಿಂದ 'ದೂರದರ್ಶನ, ಮೊಬೈಲ್ ಮತ್ತು ಇಂಟರ್‌ನೆಟ್ ಇವುಗಳನ್ನು ಧರ್ಮಶಿಕ್ಷಣವನ್ನು ನೀಡಲು ಹೇಗೆ ಉಪಯೋಗಿಸಬಹುದು ?' ಎಂಬುದರ ಬಗ್ಗೆಯೂ ಈ ಕಿರುಗ್ರಂಥದಲ್ಲಿ ಹೇಳಲಾಗಿದೆ. ಈ ಮೂಲಕ 'ಭಾರತದ ಆಧ್ಯಾತ್ಮಿಕ ಪರಂಪರೆಯನ್ನು ಕಾಪಾಡುವುದು' ಪಾಲಕರ ಮತ್ತು ಶಿಕ್ಷಕರ ಧಾರ್ಮಿಕ ಕರ್ತವ್ಯವಾಗಿದೆ.

೪. ಮಕ್ಕಳ ಮೇಲೆ ಕೆಟ್ಟ ಸಂಸ್ಕಾರಗಳನ್ನು ಮಾಡುವ, ಹಾಗೆಯೇ ರಾಷ್ಟ್ರ ಮತ್ತು ಧರ್ಮಕ್ಕೆ ಹಾನಿಯನ್ನು ಮಾಡುವಂತಹ ಕಾರ್ಯಕ್ರಮಗಳನ್ನು ತೋರಿಸುವ ದೂರದರ್ಶನ ವಾಹಿನಿಗಳಿಗೆ ಪ್ರಬೋಧನೆ ಮಾಡುವುದು, ಈ ಪ್ರಬೋಧನೆಯಿಂದ ಪರಿಣಾಮವಾಗದಿದ್ದರೆ ಅಂತಹ ದೂರದರ್ಶನ ವಾಹಿನಿಗಳನ್ನು ಬಹಿಷ್ಕರಿಸುವಂತಹ ಪ್ರಯತ್ನಗಳನ್ನು ಮಾಡುವುದು ಪಾಲಕರ ಮತ್ತು ಶಿಕ್ಷಕರ ಧರ್ಮಕರ್ತವ್ಯವೇ ಆಗಿದೆ. ಇದರ ಬಗ್ಗೆಯೂ ಈ ಕಿರುಗ್ರಂಥದಲ್ಲಿ ಮಾರ್ಗದರ್ಶನ ಮಾಡಲಾಗಿದೆ.

೫. ಸಮಾಜವು 'ಸಾಧನೆ', ಅಂದರೆ 'ಈಶ್ವರಪ್ರಾಪ್ತಿಗಾಗಿ ಪ್ರಯತ್ನ' ಮಾಡಿದರೆ ಮಾತ್ರ ಅದು ಸಾತ್ತ್ವಿಕವಾಗುತ್ತದೆ. ಒಂದು ಸಲ ವ್ಯಕ್ತಿ ಸಾತ್ತ್ವಿಕನಾದರೆ, ಸಾಧನೆಯಿಂದ ಸಿಗುವ ಆನಂದದಿಂದ ಅವನು ರಜ-ತಮಾತ್ಮಕ ವಿಷಯಗಳಿಗೆ ಬಲಿಯಾಗುವುದಿಲ್ಲ. ಆದುದರಿಂದ ಪಾಲಕರು ಮತ್ತು ಶಿಕ್ಷಕರು ಸ್ವತಃ ಸಾಧನೆ ಮಾಡಬೇಕು. ಪಾಲಕರು ಮತ್ತು ಶಿಕ್ಷಕರು 'ಮಕ್ಕಳಲ್ಲಿ ಸಾಧನೆಯ ರುಚಿಯನ್ನು ಏಕೆ ನಿರ್ಮಿಸಬೇಕು' ಎಂಬುದನ್ನೂ ಈ ಕಿರುಗ್ರಂಥದಲ್ಲಿ ಹೇಳಲಾಗಿದೆ.

ಪಾಲಕರು ಮತ್ತು ಶಿಕ್ಷಕರು ಕೇವಲ ಈ ಕಿರುಗ್ರಂಥವನ್ನು ಮಾತ್ರ ಓದಿದರೆ ಅವರಿಗೆ ಈ ಲೇಖನವು ಅಪೂರ್ಣವೆನಿಸಬಹುದು; ಏಕೆಂದರೆ 'ಟಿ.ವಿ., ಮೊಬೈಲ್ ಮತ್ತು ಇಂಟರ್‌ನೆಟ್ ಇವುಗಳ ಹಾನಿಯನ್ನು ತಡೆಗಟ್ಟಿ ಲಾಭ ಪಡೆಯಿರಿ !' ಎಂಬ ಮೂಲ ಗ್ರಂಥದಲ್ಲಿರುವ ಅಂಶಗಳು ಪುನರಾವರ್ತನೆಯಾಗದಂತೆ ಈ ಕಿರುಗ್ರಂಥದಲ್ಲಿ ನೋಡಿಕೊಳ್ಳಲಾಗಿದೆ.

ಆದುದರಿಂದ ಪಾಲಕರು ಮತ್ತು ಶಿಕ್ಷಕರು ಮೂಲ ಗ್ರಂಥ ಮತ್ತು ಈ ಕಿರುಗ್ರಂಥ ಎರಡನ್ನೂ ಓದುವುದು ಆವಶ್ಯಕವಾಗಿದೆ.

'ಈ ಕಿರುಗ್ರಂಥವನ್ನು ಓದಿ ಪಾಲಕರು ಮತ್ತು ಶಿಕ್ಷಕರು ಮಕ್ಕಳ ಬಗೆಗಿನ ತಮ್ಮ ಜವಾಬ್ದಾರಿ ಮತ್ತು ಕರ್ತವ್ಯವನ್ನು ಅರಿತು ಭಾವೀ ಪೀಳಿಗೆಯು ಎಲ್ಲ ದೃಷ್ಟಿಯಿಂದ ಆದರ್ಶವಾಗಿ ರೂಪುಗೊಳ್ಳಲು ಪ್ರಯತ್ನ ಮಾಡಲಿ', ಎಂದು ಶ್ರೀ ಗುರುಚರಣಗಳಲ್ಲಿ ಪ್ರಾರ್ಥನೆ !' – **ಸಂಕಲನಕಾರರು**

'ಸನಾತನ ಸಂಸ್ಥೆ'ಯು ಮಾತೃಭಾಷಾಭಿಮಾನಿಯಾಗಿದೆ. 'ಮಾತೃ ಭಾಷೆಯ ರಕ್ಷಣೆ ಮತ್ತು ಭಾಷಾಶುದ್ಧಿ ಚಳುವಳಿ'ಯನ್ನು ನಡೆಸಲು ಸನಾತನವು ಗ್ರಂಥಮಾಲಿಕೆಯನ್ನೂ ನಿರ್ಮಿಸಿದೆ. ಹೀಗಿರುವಾಗಲೂ ಕಿರುಗ್ರಂಥದ ಶೀರ್ಷಿಕೆಯಲ್ಲಿ, ಹಾಗೆಯೇ ಕಿರುಗ್ರಂಥದಲ್ಲಿ ಕೆಲವು ಆಂಗ್ಲ ಶಬ್ದಗಳನ್ನು ಹಾಗೆಯೇ ಇಡಲಾಗಿದೆ; ಏಕೆಂದರೆ ವ್ಯವಹಾರದಲ್ಲಿ ಅವು ಹಾಗೆಯೇ ಪ್ರಚಲಿತವಾಗಿವೆ. ಈ ಶಬ್ದಗಳಿಗೆ ಕನ್ನಡ ಶಬ್ದಗಳನ್ನು ಉಪಯೋಗಿಸಿದರೆ ಅವು ಮಕ್ಕಳಿಗೆ ಕಠಿಣವೆನಿಸಬಹುದು ಮತ್ತು ಇದರಿಂದ ವಿಷಯವನ್ನು ಅರ್ಥ ಮಾಡಿಕೊಳ್ಳುವುದರಲ್ಲಿನ ಅವರ ಸ್ವಾರಸ್ಯ ಕಡಿಮೆಯಾಗಬಹುದು. ಇದೇ ಇದರ ಹಿಂದಿನ ಏಕೈಕ ಉದ್ದೇಶವಾಗಿದೆ. ಕೆಲವು ಸಮಯದ ನಂತರ ಈ ಆಂಗ್ಲ ಶಬ್ದಗಳ ಬದಲು ಸ್ವಕೀಯ ಶಬ್ದಗಳನ್ನೇ ಉಪಯೋಗಿಸಲಾಗುವುದು.